ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.
URL : www.anekal-pa.in

ಸಂಖ್ಯೆ: ಆಯೋಪ್ರಾ:ಸಿಸಿ:432:2014-15 ದಿನಾಂಕ: 04.11.2016

## "ಕಟ್ಟಡ ಪೂರ್ಣಗೊಳಿಸಿದ ಪ್ರಮಾಣ ಪತ್ರ"

**ವಿಷಯ:** ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗೋಪಸಂದ್ರ ಗ್ರಾಮದ ಸ.ನಂ.5/1ರಲ್ಲಿನ 02ಎಕರೆ 01.12ಗುಂಟೆ ಪ್ರದೇಶದ ಖಾತಾ ನಂ.897ರಲ್ಲಿನ 160 ಘಟಕಗಳ ವಸತಿ ಸಮುಚ್ಛಯ ಕಟ್ಟಡ ನಕ್ಷೆಯಲ್ಲಿನ ಕಟ್ಟಡಕ್ಕೆ ಕಟ್ಟಡ ಪೂರ್ಣಗೊಂಡ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:**
1. ಪ್ರಾಧಿಕಾರದ ಪತ್ರ ಸಂಖ್ಯೆ:ಆಯೋಪ್ರಾ/ಸಿಸಿ/432/2014-15 ದಿನಾಂಕ: 10.09.2014.
2. ನಿಮ್ಮ ಮನವಿ ದಿನಾಂಕ: 07.04.2016.
3. ಮುತ್ತಾನಲ್ಲೂರು ಗ್ರಾಮ ಪಂಚಾಯ್ತಿ ಕಾರ್ಯಾಲಯರವರ ರವರ ಪತ್ರ ದಿನಾಂಕ:23.05.2016
4. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರ ಪತ್ರ ಸಂಖ್ಯೆ: PCB/ 72/CNP/14/H 274 ದಿನಾಂಕ:1.07.2016
5. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಇವರ ಪತ್ರ ಸಂಖ್ಯೆ: AEE/CDP/AE(T)/523 ದಿನಾಂಕ:11.05.2016.
6. ರೇಖಾ.ಎನ್ ಗೋಪಿನಾಥ್ ಇಂಜಿನಿಯರ್ ಇವರು ಕಟ್ಟಡ ಪೂರ್ಣಗೊಂಡಿರುವ ಬಗ್ಗೆ ಪ್ರಮಾಣ ಪತ್ರ ನೀಡಿದ ದಿನಾಂಕ: 19.10.2016.
7. ರೇಖಾ.ಎನ್ ಗೋಪಿನಾಥ್ ರವರು Structural Stability Certificate ನೀಡಿದ ದಿನಾಂಕ:06.03.2016.
8. ದಿನಾಂಕ:6.08.2015ರಂದು ನಡೆದ ಪ್ರಾಧಿಕಾರದ 54ನೇ ಸಭೆಯ ವಿಷಯ ಸಂಖ್ಯೆ:7ರ ನಿರ್ಣಯ.

********

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿ ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗೋಪಸಂದ್ರ ಗ್ರಾಮದ ಸ.ನಂ.5/1ರಲ್ಲಿನ 02ಎಕರೆ 01.12ಗುಂಟೆ ಪ್ರದೇಶದ ಖಾತಾ ನಂ.897ರಲ್ಲಿನ 160 ಘಟಕಗಳ ವಸತಿ ಸಮುಚ್ಛಯ ಕಟ್ಟಡ ನಕ್ಷೆಯಲ್ಲಿನ ಕಟ್ಟಡಕ್ಕೆ ಅನುಮೋದನೆ ನೀಡಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

ಉಲ್ಲೇಖ(2)ರಲ್ಲಿ ಅರ್ಜಿದಾರರು ವಸತಿ ಉದ್ದೇಶಕ್ಕಾಗಿ ಕಟ್ಟಡ ಪೂರ್ಣಗೊಳಿಸಿದ ಪ್ರಮಾಣ ಪತ್ರ ನೀಡಲು ಕೋರಿದ್ದು,ಉಲ್ಲೇಖ(3)ರಂತೆ, ಮುತ್ತಾನಲ್ಲೂರು ಗ್ರಾಮಪಂಚಾಯ್ತಿ ಕಾರ್ಯಾಲಯದಿಂದ ಕಟ್ಟಡ ಪೂರ್ಣಗೊಂಡಿರುವ ಬಗ್ಗೆ ದೃಡೀಕರಣ ಪತ್ರ ನೀಡಿರುತ್ತಾರೆ. ಮತ್ತು ಉಲ್ಲೇಖ(4) ಮತ್ತು (5)ರಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮತ್ತು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಯಿಂದ ನೀರಾಕ್ಷೇಪಣಾ ಪತ್ರ ನೀಡಿರುತ್ತಾರೆ. ಉಲ್ಲೇಖ(6) ಮತ್ತು (7)ರ ಪತ್ರದಲ್ಲಿ ರೇಖಾ.ಎನ್ ಗೋಪಿನಾಥ್ ಇಂಜಿನಿಯರ್ ರವರು ಅನುಮೋದಿತ ನಕ್ಷೆಯಂತೆ, ಕಟ್ಟಡ ನಿರ್ಮಿಸಿರುತ್ತಾರೆಂದು ಮತ್ತು ವಾಸಕ್ಕೆ ಯೋಗ್ಯವಾಗಿದೆ ಎಂದು ಕಟ್ಟಡ ಪೂರ್ಣಗೊಂಡಿರುವ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ. ಹಾಗೂ ದಿನಾಂಕ:06.03.2016ರಂದು Structural Stability Certificate ನೀಡಿರುತ್ತಾರೆ.

ಪು.ತಿ.ನೋ.

ಸ್ಥಳ ಪರಿಶೀಲಿಸಲಾಗಿ, ಪ್ರಾಧಿಕಾರದಿಂದ ಅನುಮತಿ ನೀಡಿರುವ ನಕ್ಷೆಯನ್ನು ಉಲ್ಲಂಘಿಸಿ ನೆಲ ಹಂತಸ್ತಿನಲ್ಲಿ 3 ವಸತಿ ಘಟಕಗಳಿಗೆ ಅನಧಿಕೃತವಾಗಿ ಬಾಲ್ಕನಿಗಳನ್ನು ನಿರ್ಮಿಸಿರುವುದರಿಂದ ಅರ್ಜಿದಾರರು ನಕ್ಷೆ ಅನುಮೋದನೆ ಸಮಯದಲ್ಲಿ ಪಾವತಿಸಿರುವ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಕೆಳಕಂಡ ನಿಬಂಧನೆಗಳಿಗೊಳಪಟ್ಟು ಕಟ್ಟಡ ಪೂರ್ಣಗೊಂಡ ಬಗ್ಗೆ ಪ್ರಮಾಣ ಪತ್ರ ನೀಡಲಾಗಿದೆ.

1. ವಸತಿ ಸಮುಚ್ಚಯ ಕಟ್ಟಡವನ್ನು ಈ ಪತ್ರದಲ್ಲಿ ನಮೂದಿಸಿರುವ ವಸತಿ ಉಪಯೋಗಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.
2. ಈ ಪ್ರಮಾಣ ಪತ್ರವು ಕರ್ನಾಟಕ ನಗರ ಮತ್ತು ಗ್ರಾಮೀಣ ಯೋಜನಾ ಅಧಿನಿಯಮಕ್ಕೆ ಸೀಮಿತವಾಗಿರುತ್ತದೆ. ಪ್ರಾರಂಭಿಕ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿರುವ ಷರತ್ತುಗಳನ್ನು ಪರಿಪಾಲಿಸತಕ್ಕದ್ದು.
3. ಕಟ್ಟಡದ ಸ್ಥಿರತೆಯ ಬಗ್ಗೆ ಮತ್ತು ಭದ್ರತೆಯ ಬಗ್ಗೆ ಇಂಜಿನಿಯರ್ ರವರುಗಳೇ ಸಂಪೂರ್ಣ ಜವಬ್ದಾರರಾಗಿ-ರುತ್ತಾರೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಯೋಜನಾ ಪ್ರಾಧಿಕಾರವು ಬದ್ಧವಾಗಿರುವುದಿಲ್ಲ.
4. ಈ ಕಟ್ಟಡ ಪೂರ್ಣಗೊಳಿಸಿದ ಪ್ರಮಾಣ ಪತ್ರ ನೀಡಿರುವ ಮಾತ್ರಕ್ಕೆ ಯಾವುದೇ ನಾಗರೀಕ ಸೌಲಭ್ಯವನ್ನು ನೀಡುವ ಹೊಣೆಗಾರಿಕೆ ಪ್ರಾಧಿಕಾರಕ್ಕಿರುವುದಿಲ್ಲ.
5. ಕಟ್ಟಡದ ಮುಂಭಾಗದ ರಸ್ತೆಯನ್ನು ಅಭಿವೃದ್ಧಿ/ನಿರ್ವಹಣೆಯನ್ನು ಅಭಿವೃದ್ಧಿದಾರರು/ಕಟ್ಟಡದ ಮಾಲೀಕರ ಸಂಘದವರು ಮಾಡತಕ್ಕದ್ದು.
6. ಅನುಮೋದಿತ ಕಟ್ಟಡ ನಕ್ಷೆಯಂತೆ ಸೌರಶಕ್ತಿಯ ವಿದ್ಯುತ್‌ಅನ್ನು ಕಡ್ಡಾಯವಾಗಿ ಅಳವಡಿಸಿ ಉಪಯೋಗಿ-ಸತಕ್ಕದ್ದು.
7. ಕಟ್ಟಡ ಪೂರ್ಣಗೊಂಡ ಪ್ರಮಾಣ ಪತ್ರ ನೀಡುವ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಅನುಮೋದನೆಯು ಯಾವ ಪೂರ್ವ ಸೂಚನೆಯು ಇಲ್ಲದೇ ತಂತಾನೆ ರದ್ದುಗೊಳ್ಳುತ್ತದೆ.

prasad 04/11/16

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ
ನಿರ್ದೇಶಕರು ಹಾಗೂ ಸದಸ್ಯ- ಕಾರ್ಯದರ್ಶಿ,
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

ಇವರಿಗೆ,

**M/s Asset Handlers Private Limited**

**ಪರವಾಗಿ ಶ್ರೀ ಎಂ.ರೆಹಮಾನ್ ಜಿಪಿಎ ದಾರರು,**

ನಂ.476, 2ನೇ ಫ್ಲೋರ್, 80 ಅಡಿ ರಸ್ತೆ,

6ನೇ ಬ್ಲಾಕ್, ಕೋರಮಂಗಲ,

ಬೆಂಗಳೂರು-560 095.